ದಿನಾಂಕಃ 20-02-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲುಃ ವಾದಿ ಪರ ಶ್ರೀ ಹೆಚ್ ಎಂ ವಿ ವಕೀಲರಿಂದ</u>**

ವಾದಿ ನನ್ನ ಹಿರಿಯ ಅಣ್ಣ. ವಾದಿ ಈ ದಾವೆಯನ್ನು ಆಸ್ತಿ ಬೇಕು ಎಂದು ಹೂಡಿರುತ್ತಾರೆ. ದಾವಾಸ್ತಿ ಬಸವಪಟ್ಟಣದಲ್ಲಿದೆ. ದಾವಾಸ್ತಿ ಮೂಲತಃ ನನ್ನ ತಾಯಿಯಾದ ಚಾಂದ್ ಬೀ ರವರ ಹೆಸರಿನಲ್ಲಿತ್ತು. ಅದಕ್ಕೂ ಮುನ್ನ ಸದರಿ ಆಸ್ತಿ ಯಾರ ಹೆಸರಿನಲ್ಲಿಯೂ ಇರಲಿಲ್ಲ. ವಾದಿ ಈ ದಾವೆ ಹಾಜರುಪಡಿಸಿದ ದಾಖಲೆಗಳನ್ನು ನಾನು ತಿಳಿದುಕೊಂಡಿರುವುದಿಲ್ಲ. ನನ್ನ ತಾಯಿಯ ಹೆಸರಿಗೆ 1993-94 ನೇ ಸಾಲಿನಿಂದ ದಾವಾಸ್ತಿಯ ಖಾತೆ ಇದೆ. ನನ್ನ ತಾಯಿಯ ಹೆಸರಿಗೆ ಸದರಿ ಖಾತೆ ಯಾವ ರೀತಿ ಬಂತು ಎಂದರೆ ಸಾಕ್ಷಿ ಖರೀದಿ ಮಾಡಿರುತ್ತೇವೆ ಎಂದು ನುಡಿಯುತ್ತಾರೆ. ಸದರಿ ಖರೀದಿ ಮಾಡಿದ ಬಗ್ಗೆ ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಸದರಿ ದಾವಾಸ್ತಿ ಖರೀದಿ ಮಾಡಿದ ಆಸ್ತಿ ಎಂಬ ಬಗ್ಗೆ ನನ್ನ ತಕರಾರಿನಲ್ಲಿ ನಮೂದಿಸಿರುವುದಿಲ್ಲ. ತಕರಾರ ಸಲ್ಲಿಸಲು ನಮ್ಮ ವಕೀಲರಿಗೆ ಮಾಹಿತಿಯನ್ನು ನಾವೇ ಕೊಟ್ಟಿರುತ್ತೇವೆ. ಸದರಿ ಸಮಯಕ್ಕೆ ದಾವಾಸ್ತಿಯನ್ನು ಖರೀದಿಗೆ ಪಡೆದಿದ್ದು ಎಂದು ಹೇಳಲು ನಮಗೆ ಯಾವುದೇ ತೊಂದರೆಯಿರಲಿಲ್ಲ.

2. ನನ್ನ ತಾಯಿ 2015ರಲ್ಲಿ ಮೃತಪಟ್ಟಿರುತ್ತಾರೆ. ನನ್ನ ತಾಯಿ ತನ್ನ ಜೀವಿತಾವಧಿಯಲ್ಲಿ ದಾವಾಸ್ತಿಯನ್ನು ಯಾರಿಗೂ ವಿಲೇ ಮಾಡಿಲ್ಲ ಎಂದರೆ ಸರಿ. ವಾದಿ ಪ್ರಸ್ತುತ ಬಸವಪಟ್ಟಣದಲ್ಲಿ ವಾಸವಾಗಿದ್ದಾರೆ ಎಂದರೆ ಇರಬಹುದು. ವಾದಿ ದಾವಣಗೆರೆಯಲ್ಲಿ ವಾಸವಿದ್ದ ಬಗ್ಗೆ ನಾನು ನಮ್ಮ ತಕರಾರಿನಲ್ಲಿ ಬರೆಸಿರುತ್ತೇವೆ. ವಾದಿ ದಾವಣಗೆರೆಯಲ್ಲಿ 3-4 ವರ್ಷವಷ್ಟೆ ವಾಸವಾಗಿದ್ದರು. ದಾವಾಸ್ತಿಯಲ್ಲಿ ನನಗೂ ಹಿಸ್ಸಾ ಹಕ್ಕು ಇದೆ ಎಂದು ವಾದಿ ನಮ್ಮನ್ನು ಕೇಳಿದ್ದರು ಎಂದರೆ ಸರಿ. ಸದರಿ ವಾದಿಯ ಕೋರಿಕೆಯನ್ನು ನಾವು ತಿರಸ್ಕರಿಸಿದ ಕಾರಣ ವಾದಿ ಈ ದಾವೆ ಹೂಡಿದ್ದಾರೆ ಎಂದರೆ ಸರಿ. ದಾವಾಸ್ತಿಯ ಮೇಲೆ ಸಾಲ ತೆಗೆದು ನಮ್ಮ ವಿವಾಹ ಮಾಡಿರುವ ಕುರಿತು ದಾಖಲೆಗಳು ಇವೆ. ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನಮಗೇನು ತೊಂದರೆಯಿಲ್ಲ.

3. ದಾವಾಸ್ತಿಯ ಮೇಲೆ ಅಬ್ದುಲ್ ಗನೀ ಸಾಬ್ ರವರ ಮಗನಾದ ಅಬ್ದುಲ್ ಫಾರುಖ್ ರವರಿಂದ 1992 ರಲ್ಲಿ ರೂ.50000/-ಗಳನ್ನು ನನ್ನ ಅಕ್ಕನಾದ ಹಸೀನಾರವರ ಮದುವೆಗಾಗಿ, 1995 ರಲ್ಲಿ 3ನೇ ಪ್ರತಿವಾದಿಯ ಮದುವೆಗಾಗಿ 50 ಸಾವಿರ ರೂ ಗಳನ್ನು, 2011ರಲ್ಲಿ 4 ನೇ ಪ್ರತಿವಾದಿಯ ಮದುವೆಗಾಗಿ 1 ಲಕ್ಷ ರೂ.ಗಳನ್ನು ಮತ್ತು ಒಂದು ತಿಂಗಳ ನಂತರ 2011 ರಲ್ಲಿ ನನ್ನ

ಮದುವೆಗಾಗಿ 1 ಲಕ್ಷ ರೂ.ಗಳನ್ನು ಸಾಲವಾಗಿ ಪಡೆದಿದ್ದೆವೆ. ಸದರಿ ಸಾಲಗಳಿಗೆ ಯಾವುದೇ ಬಡ್ಡಿಯನ್ನು ಕೊಟ್ಟಿರುವುದಿಲ್ಲ. 1992, 1995 ರಲ್ಲಿ ಮದುವೆಗೆ ಸದರಿಯವರಿಂದ ಪಡೆದ ಸಾಲವನ್ನು ನಾವು ತೀರಿಸಿರುವುದಿಲ್ಲ. ಸದರಿ ಸಾಲ ಪಡೆಯುವ ಸಮಯಕ್ಕೆ ನಾವು ಸದರಿ ಫಾರುಖ್ ಸಾಬ್ ರವರಿಗೆ ಯಾವುದೇ ದಾಖಲೆಯನ್ನು ಬರೆದುಕೊಟ್ಟಿರುವುದಿಲ್ಲ. ಸದರಿ ಫರೂಖ್ ಸಾಬ್ ರವರು ಸದರಿ ಸಾಲವನ್ನುತೀರಿಸುವಂತೆ ನಮಗೆ ಯಾವುದೇ ನೋಟಿಸನ್ನು ಕೊಟ್ಟಿರುವುದಿಲ್ಲ. ಸಾಕ್ಷಿ ಮುಂದುವರೆದು ನಮ್ಮ ತಾಯಿ ಮತ್ತು 1ನೇ ಪ್ರತಿವಾದಿಯನ್ನು ಕರೆದು 2009-10 ರಲ್ಲಿ ಕೇಳಿರುತ್ತಾರೆ. ಸದರಿ ಸಂಗತಿಯನ್ನು ನಮ್ಮ ತಕರಾರಿನಲ್ಲಿ ನಮೂದಿಸಿರುವುದಿಲ್ಲ.

4. ನಾವು ದಾವಾಸ್ತಿಯ ಮೇಲೆ ಯಾವುದೇ ಸಾಲವನ್ನು ಮಾಡದೇ ಇದ್ದರು ಸಹ ನಮ್ಮ ಅನುಕೂಲಕ್ಕೆ ತಕ್ಕಂತೆ ಸೃಷ್ಟಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ವಾದಿ ದಾವಾಸ್ತಿಯಲ್ಲಿ ನನಗೂ ಹಿಸ್ಸೆ ಬೇಕುಎಂದು ಕೇಳಿದ್ದರಿಂದ ಸದರಿ ಕೋರಿಕೆಯನ್ನು ತಿರಸ್ಕರಿಸಿ ಸಾಲವಿದೆ ಎಂದು ಸುಳ್ಳು ತಕರಾರು ಸಲ್ಲಿಸಿದ್ದೆನೆ ಎಂದರೆ ಸರಿಯಲ್ಲ. ನನ್ನ ತಾಯಿ ಮೃತಪಟ್ಟ ತರುವಾಯ ದಾವಾಸ್ತಿಯ ಖಾತೆ ಬದಲಾವಣೆಗಾಗಿ ವಾದಿ ಅರ್ಜಿಯನ್ನು ಪಂಚಾಯತಿಗೆ ಕೊಟ್ಟಿದರು ಎಂದರೆ ಸರಿ. ನಾನು ಸದರಿ ಅರ್ಜಿಗೆ ತಕರಾರನ್ನು ಸಲ್ಲಿಸಿರುತ್ತೇವೆ ಎಂದರೆ ಸರಿ. ವಾದಿಗೆ ತೊಂದರೆಕೊಡುವ ಉದ್ದೇಶದಿಂದ ಸುಳ್ಳು ತಕರಾರನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾಸ್ತಿಯಲ್ಲಿ ನಾವೇ ಸ್ವಾಧಿನದಲ್ಲಿದ್ದು ದಾವಾಸ್ತಿಯ ಮೇಲೆ ಕಂದಾಯ ಕಟ್ಟಿದ ಬಗ್ಗೆ ದಾಖಲೆಗಳು ಇವೆಯೇ ಎಂದರೆ ಸಾಕ್ಷಿ ಮನೆಯಲ್ಲಿವೆ ಎಂದು ನುಡಿಯುತ್ತಾರೆ. ಕಂದಾಯ ರಶೀದಿಗಳನ್ನು ಹಾಜರುಪಡಿಸಲು ನನಗೇನು ತೊಂದರೆಯಿಲ್ಲ. ನನ್ನ ತಾಯಿ ನಮ್ಮ ಮದುವೆ ಮಾಡಲು ದಾವಾಸ್ತಿಯ ಮೇಲೆ ಯಾವುದೇ ಸಾಲ ಮಾಡದೇ ಇದ್ದರು ಸಹ ಈ ದಾವೆಗಾಗಿ ಅದನ್ನುಸುಳ್ಳು ಸೃಷ್ಟಿ ಮಾಡಿದ್ದೆವೆ ಎಂದರೆ ಸರಿಯಲ್ಲ. ನಮಗೆ ಇರುವಂತೆ ವಾದಿಗೂ ಸಹ ದಾವಾಸ್ತಿಯಲ್ಲಿ ಹಿಸ್ಸೆ ಹಕ್ಕು ಇದೆ ಎಂದರೆ ಸರಿ.

**ಮರು ವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)** **ಓ.ಹೇ.ಕೇ. ಸರಿ ಇದೆ.**

02ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ.ಚನ್ನಗಿರಿ.